**<u>ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಮೂಡಿಗೆರೆ.</u>**

<u>ಸಿ.ಸಿ ನಂಬರ್‌ಃ **475/2014**</u>

<u>ಪಿರ್ಯಾದಿ</u> **:** ರಾಜ್ಯ, ಪರವಾಗಿ ಮೂಡಿಗೆರೆ ಪೊಲೀಸರು,
ಮೂಡಿಗೆರೆ ತಾಲ್ಲೂಕು.

<u>ವಿರುದ್ಧ</u>

<u>ಆರೋಪಿತರು</u> **:** **1.** ಕುಮಾರರಾಜು,
ವಯಸ್ಸು ಸುಮಾರು 48 ವರ್ಷ,
ಬಿನ್ ಗೋಪಾಲರಾಜು,
ವಾಸಃ ಬಿಳಗುಳ ಗ್ರಾಮ, ಮೂಡಿಗೆರೆ ತಾಲ್ಲೂಕು.

**2.** ದಿಃ ಗಣೇಶ, **(**ಮೃತಪಟ್ಟಿರುತ್ತಾರೆ**)**
ನಿವೃತ್ತ ಕಾರ್ಯದರ್ಶಿ,
ಹೆಸ್ಗಲ್ ಗ್ರಾಮ ಪಂಚಾಯಿತಿ,
ಮೂಡಿಗೆರೆ ತಾಲ್ಲೂಕು.

* * * * *

<u>ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಮಾಡಿಕೊಳ್ಳಲಾದ ಆರೋಪಿತರ ರವರ ಹೇಳಿಕೆ</u>

ಪ್ರಶ್ನೆ 1) ಅಭಿಯೋಜನೆಯ ಪರ ಹಾಜರಾದ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

1 ನೇ ಆರೋಪಿಯ ಉತ್ತರಃ

ಪ್ರಶ್ನೆಃ 2) ಪ್ರಾಸಾ 1 ಹೆಚ್.ಜಿ.ಪ್ರಸನ್ನ ಕುಮಾರ್ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 31.03.2011 ರಲ್ಲಿ ಅವರು ಚಾಸಾ-3 ರವರಿಂದ ಹೆಸ್ಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ.ನಂ.16 ರಲ್ಲಿ 60 x 40 ಸೈಟನ್ನು ಖರೀದಿಸಿದ್ದು, ನಂತರ ಅವರು ಖಾತೆಗಾಗಿ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದಾಗ ಆರೋಪಿಯಾದ ನೀವು ಅವರ ಬಳಿ ದಾಖಲಾತಿಗಳು ಇವೆ ಎಂದು ತಕರಾರು ಮಾಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 3) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನೀವು 1982-83 ರಲ್ಲಿ ರಾಮೇಗೌಡ ಎಂಬ ಹೆಸರಿನಲ್ಲಿ ಖಾತಾ ನಂಬರ್ 151 ಇದ್ದು, ಅದನ್ನು ಆರೋಪಿಯಾದ ನೀವು ನಿಮ್ಮ ಹೆಸರಿಗೆ ಮಾಡಿಕೂಂಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 4) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರ್ ಟಿ ಐ ಅಡಿಯಲ್ಲಿ ತಹಶೀಲ್ದಾರವರಿಂದ ದಾಖಲಾತಿಗಳನ್ನು ಪಡೆದುಕೊಂಡಾಗ ತಹಶೀಲ್ದಾರರವರು ಆರೋಪಿಯಾದ ನಿಮ್ಮ ಬಳಿ ಇರುವ ದಾಖಲಾತಿಗಳು ಸುಳ್ಳು ದಾಖಲಾತಿಗಳು ಎಂದು ತಕರಾರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 5) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀವು 1967 ರಲ್ಲಿ ಹುಟ್ಟಿದ್ದು, 1982 ರಲ್ಲಿ ಖಾತೆ ಆಗುವಾಗ ಆರೋಪಿಯಾದ ನಿಮಗೆ 15 ವರ್ಷಗಳು ಆಗುತ್ತದೆ, ಆ ವಯಸ್ಸಿಗೆ ಖಾತೆ ದಾಖಲಾಗುವುದು ಅಸಾಧ್ಯವಾಗಿದ್ದು, ಅವರಿಗೆ ಆರೋಪಿಯಾದ ನಿಮ್ಮ ದಾಖಲಾತಿಗಳು ಸುಳ್ಳು ಎಂದು ತಿಳಿದುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 6) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಈ ಪ್ರಕಾರಣಕ್ಕಾಗಿ ಸಿವಿಲ್ ದಾವೆಯನ್ನು ಹೂಡಿದ್ದು, ಕೆಳ ನ್ಯಾಯಾಲಯ ಮತ್ತು ಮೇಲ್ಮನವಿ ನ್ಯಾಯಾಲಯದಲ್ಲಿ ಅವರ ಪರವಾಗಿ ಆಗಿದ್ದು, ನಂತರ ಸದರಿ ತೀರ್ಪನ್ನು ಪಂಚಾಯಿತಿಗೆ ತೆಗೆದುಕೊಂಡು ಹೋದಾಗ ಪಂಚಾಯಿತಿಯವರು ಮಾಲೀಕತ್ವದ ಡಿಕ್ರಿಯನ್ನು ಪಡೆಯುವಂತೆ ಹೇಳಿರುತ್ತಾರೆ ಎಂದು ತಕರಾರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 7) ಪ್ರಾಸಾ 1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅವರು ಸಿವಿಲ್ ನ್ಯಾಯಾಲಯದಲ್ಲಿ ಮಾಲೀಕತ್ವ ಪಡೆಯಲು ಸಿವಿಲ್ ದಾವೆ ಹೂಡಿದ್ದು, ಈ ಪ್ರಕರಣದಲ್ಲಿ ಅವರ ಜಿಪಿಎ ಆದ ಅವರ ತಂದೆಯವರು ದೂರನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 8) ಪ್ರಾಸಾ 2 ಗೋಪಾಲಗೌಡ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 31.12.2021 ರಲ್ಲಿ ಚಾಸಾ-1 ರವರು ಚಾಸಾ-3 ರವರಿಂದ ಹೆಸ್ಗಲ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸ.ನಂ.16 ರಲ್ಲಿ 60 X 40 ಸೈಟನ್ನು ಖರೀದಿಸಿದ್ದು, ನಂತರ ಚಾಸಾ-1 ರವರು ಖಾತೆಗೆ ಪಂಚಾಯಿತಿಗೆ ಅರ್ಜಿಯನ್ನು ಸಲ್ಲಿಸಿದಾಗ ಆರೋಪಿಯಾದ ನೀವು ನಿಮ್ಮ ಬಳಿ ದಾಖಲಾತಿಗಳು ಇವೆ ಎಂದು ತಕರಾರು ಮಾಡಿರುತ್ತೀರಿ

ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 9) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರೋಪಿಯಾದ ನೀವು 1982-83 ರಲ್ಲಿ ಖಾತಾ ನಂ.151 ರ ದಾಖಲಾತಿಗಳನ್ನು ಸುಳ್ಳಾಗಿ ಸೃಷ್ಠಿಸಿ ಹಾಜರುಪಡಿಸಿರುತ್ತೀರೆಂದು ಹಾಗೂ ನಟರಾಜ್ ಬಿನ್ ರಾಮೇಗೌಡ ಎಂಬ ಹೆಸರಿನಲ್ಲಿ ಖಾತಾ ನಂಬರ್ 151 ಇದ್ದು, ಅದನ್ನು ಆರೋಪಿಯಾದ ನೀವು ನಿಮ್ಮ ಹೆಸರಿಗೆ ಮಾಡಿಕೊಂಡಿರುತ್ತೀರಿ ಎಂದು ತಕರಾರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 10) ಪ್ರಾಸಾ 2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆರ್ ಟಿ ಐ ಅಡಿಯಲ್ಲಿ ತಹಶೀಲ್ದಾರವರಿಂದ ದಾಖಲಾತಿಗಳನ್ನು ಪಡೆದುಕೊಂಡಾಗ ತಹಶೀಲ್ದಾರರವರು ಆರೋಪಿಯಾದ ನಿಮ್ಮ ಬಳಿ ಇರುವ ದಾಖಲಾತಿಗಳು ಸುಳ್ಳು ದಾಖಲಾತಿಗಳು ಎಂದು ತಕರಾರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 11) ಪ್ರಾಸಾ 3 ಸಮಿವುಲ್ಲಾ ಶರೀಫ್ ಸಿ.ಜೆಡ್. ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 07.05.2014 ಕ್ಕೆ ಸಂಬಂದಿಸಿದಂತೆ ನೀಡಲು ಕೋರಿಕೊಂಡಿದ್ದು, ಸದರಿ ಪತ್ರವನ್ನು ಅವರು ದಿನಾಂಕಃ 05.05.2014 ರಂದು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 12) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿಯವರ ಕೋರಿಕೆ ಮೇರೆಗೆ ಅವರು ದಿನಾಂಕಃ 07.05.2014 ರಂದು ಸದರಿ ಕುಮಾರರಾಜು ಬಿನ್ ಗೋಪಾಲರಾಜು ರವರ ಹೆಸರಿಗೆ ಗ್ರಾಮ ಪಂಚಾಯಿತಿ ಖಾತೆ ನಂ.296 (Assessment No.296) ಖಾತೆ ಸಂಖ್ಯೆಯು 15/2000-01, ದಿನಾಂಕಃ 15.06.2001 ರಂತೆ ದಾಖಲಾಗಿರುತ್ತದೆ ಹಾಗೂ ಸದರಿ ಖಾತೆಯನ್ನು ಅಂದಿನ ಕಾರ್ಯದರ್ಶಿ ಮೃತ ಗಣೇಶ್ ರವರು ಹಕ್ಕು ಪತ್ರದ ಆಧಾರದ ಮೇಲೆ ಮಾಡಿದ್ದು ಮಾಹಿತಿಯನ್ನು ಅವರ ಕಛೇರಿ ಪತ್ರ ಸಂ.12/2014-15 ರಂತೆ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ

ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 13) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಅದರೊಂದಿಗೆ ಮ್ಯುಟೇಷನ್ ವಹಿ 15/2000-01 ರ ದೃಢಿಕೃತ ದಾಖಲಾತಿಯನ್ನು ಮತ್ತು ಅಸೆಸ್ ಮೆಂಟ್ ರಿಜಿಸ್ಟರ್ ಪ್ರತಿಯನ್ನು ಸಹ ಲಗತ್ತಿಸಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 14) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 13.01.2014 ರಂದು ಮೂಡಿಗೆರೆ ಪೊಲೀಸ್ ಠಾಣೆಯಿಂದ ಬಿಳಗುಳ ಗ್ರಾಮದ ಸ.ನಂ.16 ರಲ್ಲಿ ನಿವೇಶನದ ಹಕ್ಕು ಪತ್ರ ಸಂ.151/1982-93 ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ನೀಡುವಂತೆ ಕೋರಿಕೊಂಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 15) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಸದರಿ ಪತ್ರವನ್ನು ಅವರು ದಿನಾಂಕಃ 13.01.2014 ರಂದು ಸ್ವೀಕರಿಸಿ, ದಿನಾಂಕಃ 01.02.2014 ರಂದು ಅವರ ಕಛೇರಿ ಪತ್ರ ಸಂ.37/2013-14 ರಂತೆ ಮಾಹಿತಿಯನ್ನು ಮತ್ತು ಅದರೊಂದಿಗೆ ಹಕ್ಕು ಪತ್ರದ ದೃಢಿಕೃತ ನಕಲು, ಸ.ನಂ.16 ರ ರವೆನ್ಯೂ ಸ್ಕೆಚ್ ನ ದೃಢೀಕೃತ ನಕಲು, ಕ್ರಮ ಸಂ.15/2000-01 ರ ದೃಢಿಕೃತ ನಕಲು, ಕಂದಾಯ ಪಾವತಿ ರಶೀದಿಯ ದೃಢೀಕೃತ ನಕಲು 2013-14 ನೇ ಸಾಲಿನ ಅಸೆಸ್ ಮೆಂಟ್ ರಿಜಿಸ್ಟರಿನ ದೃಢಿಕೃತ ಪ್ರತಿ, ಬೇಡಿಕೆ ಪುಸ್ತಕ ದೃಢಿಕೃತ ಪ್ರತಿಗಳನ್ನು ನೀಡಿರುತ್ತೇನೆ ಎಂದು ತಕರಾರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 16) ಪ್ರಾಸಾ 3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 10.05.2010 ರ ಕಟ್ಟಡ ಪರವಾನಗಿಯ ದೃಢಿಕೃತ ಪ್ರತಿ, ಗ್ರಾಮ ಪಂಚಾಯಿತಿ ಠರಾವಿನ ದೃಢೀಕೃತ ಪ್ರತಿ ಹಾಗೂ ದಿನಾಂಕಃ 05.09.2012 ರ ಗ್ರಾಮ ಪಂಚಾಯಿತಿ ಠರಾವಿನ ದೃಢಿಕೃತ ಪ್ರತಿಗಳನ್ನು ನೀಡಿರುತ್ತೇನೆ ಎಂದು ತಕರಾರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 17) ಪ್ರಾಸಾ 4 ಬಿ.ವಿ. ಪುರುಷೋತ್ತಮ ರಾಜ್ ಅರಸ್ ರವರು ತಮ್ಮ ಸಾಕ್ಷ್ಯದಲ್ಲಿ ಅವರು ಹೆಸ್ಗಲ್ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಕಾಲಕ್ಕೆ ಮೃತ 2 ನೇ ಆರೋಪಿಯು ಕಾರ್ಯದರ್ಶಿಯಾಗಿ ಅಂದಾಜು 2012 ರವರೆಗೆ ಕಾರ್ಯನಿರ್ವಹಿಸುತ್ತಿದ್ದು 2012 ನೇ ಸಾಲಿನಲ್ಲಿ ಮೃತಿಯಾಗಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 18) ಪ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಂತರ ಆ ಕಾಲಕ್ಕೆ ಅವರು ಮತ್ತು ಮೃತ 2 ನೇ ಆರೋಪಿಯಾದ ಗಣೇಶ್ ರವರು ಮಾತ್ರ ಪಂಚಾಯಿತಿ ಕೆಲಸ ಮಾಡುತ್ತಿದ್ದ ಕಾರಣ ಹೆಚ್ಚಿನ ಕೆಲಸದ ಒತ್ತಡವಿತ್ತು ಆದ್ದರಿಂದ ಅವರು ಕೆಲಸ ಮುಗಿದ ನಂತರ ಮೃತ ಕೆ.ಗಣೇಶ್ ರವರು ಅವರ ಕಡೆಗಳಿಂದ ಕೆಲವು ಪಂಚಾಯಿತಿ ದಾಖಲೆಗಳಲ್ಲಿ ಬರವಣಿಗೆ ಮಾಡಿಸುತ್ತಿದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 19) ಪ್ರಾಸಾ 4 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ಸದರಿ ಬರವಣಿಗೆಗಳು ಅವರ ಹಸ್ತಾಕ್ಷರದಿಂದ ಕೂಡಿರುತ್ತದೆ ಮತ್ತು ಅವುಗಳನ್ನು ಮೃತ ಕೆ.ಗಣೇಶ್ ರವರ ಮೌಖಿಕ ಆದೇಶದ ಮೇರೆಗೆ ಬರೆಯುತ್ತಿದ್ದು ಯಾವುದೇ ದಾಖಲೆಗಳನ್ನು ಪರಿಶೀಲಿಸುತ್ತಿರಲಿಲ್ಲ, ಸ.ನಂ.16 ರ ನಿವೇಶನಕ್ಕೆ ಸಂಬಂದಿಸಿದಂತೆ ಕುಮಾರರಾಜು ರವರ ಹೆಸರಿಗೆ ಖಾತೆ ಮಾಡಲಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 20) ಪ್ರಾಸಾ 5 ಎಂ.ಎನ. ಶ್ರೀನಿವಾಸ್ ರವರು ತಮ್ಮ ಸಾಕ್ಷ್ಯದಲ್ಲಿ ಮೂಡಿಗೆರೆ ಪೋಲಿಸರು ಅವರಿಗೆ ಕೆಲವು ದಾಖಲಾತಿಗಳನ್ನು ಪೂರೈಸಲು ನೋಟೀಸು ನೀಡಿದ್ದು, ಅದರಂತೆ ಅವರು ದಿನಾಂಕಃ 05.02.2014 ರಂದು ಪೊಲೀಸರಿಗೆ ಅವರು ಕೇಳಿದ ದಾಖಲಾತಿಗಳನ್ನು ಪೂರೈಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆ: 21) ಪ್ರಾಸಾ 5 ಎ.ಕೆ.ಸಂಕಪ್ಪಯ್ಯ ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ:02.12.2013 ರಂದು ಅವರು ಠಾಣಾ ಪ್ರಭಾರದಲ್ಲಿದ್ದಾಗ, ಸಂಜೆ 04.30 ಗಂಟೆಗೆ ನ್ಯಾಯಾಲಯದ ಕರ್ತವ್ಯಕ್ಕೆ ನೇಮಿಸಿದ ಹೆಚ್.ಸಿ.103 ರವರು ನ್ಯಾಯಾಲಯದಿಂದ ಪಿ.ಸಿ.ಆರ್.388/2013 ರ ದೂರನ್ನು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ, ಠಾಣಾ ಅಪರಾಧ ಸಂಖ್ಯೆ:158/2013 ರಂತೆ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ, ನಂತರ ದೂರು ಮತ್ತು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರ:

ಪ್ರಶ್ನೆ: 22) ಪ್ರಾಸಾ 5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ:25.12.2013 ರಂದು ಚಾಸಾ-1 ಮತ್ತು 2 ರವರಿಗೆ ನೋಟಿಸು ನೀಡಿ, ದಿನಾಂಕ:16.01.2014 ರಂದು ಚಾಸಾ-9 ರವರಿಗೆ ಸ್ವತ್ತಿಗೆ ಸಂಬಂದಿಸಿದ ದಾಖಲಾತಿಯನ್ನು ನೀಡುವಂತೆ ಮನವಿ ನೀಡಿ, ದಿನಾಂಕ:27.04.2014 ರಂದು ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-11 ರವರಿಗೆ ವರ್ಗಾಯಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರ:

ಪ್ರಶ್ನೆ: 23) ಪ್ರಾಸಾ 9 ಕೆ.ವಿ. ಅನಂತ ಪದ್ಮನಾಭ ರವರು ತಮ್ಮ ಸಾಕ್ಷ್ಯದಲ್ಲಿ ದಿ.27.04.2014 ರಂದು ಪ್ರಕರಣದ ಕಡತವನ್ನು ಮುಂದಿನ ತನಿಖೆ ಸಂಬಂಧ ಚಾಸಾ-10 ರವರಿಂದ ಸ್ವೀಕರಿಸಿ, ತನಿಖೆ ಮುಂದುವರೆಸಿ, ಚಾಸಾ-7 ರವರಿಗೆ ಪತ್ರ ಬರೆದು, ದಾಖಲಾತಿಗಳನ್ನು ಹಾಗೂ ಸ್ಪಷ್ಟೀಕರಣವನ್ನು ನೀಡುವಂತೆ ಕೋರಿ, ಅದೇದಿನ ಚಾಸಾ-1 ರವರಿಗೆ ನೋಟೀಸು ನೀಡಿ ದಾಖಲೆಗಳನ್ನು ಹಾಜರುಪಡಿಸುವಂತೆ ಕೋರಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರ:

ಪ್ರಶ್ನೆ: 24) ಪ್ರಾಸಾ 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.15.05.2014 ರಂದು ಚಾಸಾ-7 ರವರು ಕಳುಹಿಸಿಕೊಟ್ಟ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿ, ದಿ.16.05.2014 ರಂದು ಆರೋಪಿಯಾದ ನಿಮಗೆ ನೋಟೀಸು ನೀಡಿ ದಾಖಲೆಯನ್ನು ಹಾಜರುಪಡಿಸುವಂತೆ ಸೂಚಿಸಿ, ದಿ.20.05.2014 ರಂದು ಚಾಸಾ-3 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿ, ಉಪನೊಂದಾಣಾಧಿಕಾರಿ, ಜನನ ಮತ್ತು ಮರಣ ನೋಂದಣಿ ವಿಭಾಗ, ಮೂಡಿಗೆರೆ ರವರಿಂದ

2 ನೇ ಆರೋಪಿಯ ಮರಣ ದೃಢೀಕರಣ ಪ್ರಮಾಣಪತ್ರ ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 25) ಪ್ರಾಸಾ 9 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿ.16.06.2014 ರಂದು ಚಾಸಾ-2 ರವರ ಹೇಳಿಕೆಯನ್ನು ದಾಖಲಿಸಿ, ನಂತರ ತನಿಖೆ ಪೂರ್ಣಗೊಳಿಸಿ ಸಾಕ್ಷ್ಯಧಾರಗಳು ಕಂಡುಬಂದ ಕಾರಣ ಆರೋಪಿಯಾದ ನಿಮ್ಮ ವಿರುದ್ಧ ದೋ.ಪ. ಸಲ್ಲಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಉತ್ತರ ಏನು?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 26) ನೀವು ನ್ಯಾಯಾಲಯಕ್ಕೆ ಹೆಚ್ಚಿಗೆ ಏನಾದರೂ ಹೇಳಲು ಇದೆಯೇ ?

1 ನೇ ಆರೋಪಿತರ ಉತ್ತರಃ

ಪ್ರಶ್ನೆಃ 27) ನಿಮ್ಮ ಪರ ಸಾಕ್ಷ್ಯ ವಿಚಾರಣೆ ಇದೆಯೇ ?

1 ನೇ ಆರೋಪಿತರ ಉತ್ತರಃ

(ಮೇಲಿನ ಸಾಕ್ಷಿದಾರರ ಎಲ್ಲಾ ಹೇಳಿಕೆಗಳನ್ನು ಶೀಘ್ರಲಿಪಿಗಾರರಿಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತರಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡಿರುತ್ತೇನೆಂದು ದೃಢಪಡಿಸಿಕೊಳ್ಳಲಾಗಿದೆ)

ಸಹಿ/-
ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ
ನ್ಯಾಯಾಲಯ, ಮೂಡಿಗೆರೆ.

ಮೂಡಿಗೆರೆ.
ದಿನಾಂಕಃ 20.06.2025.

1 ನೇ ಆರೋಪಿಯ ಸಹಿ